**File No.RDPR/164/ZPA/2019-RDPR_SO_SERV_A-RDPR SEC**

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಶ್ರೀಮತಿ ಕೌಸರ್ ಪರ್ವೀನ್, ಹಿಂದಿನ ಪ್ರಥಮ ದರ್ಜೆ ಸಹಾಯಕರು, ಮುಖ್ಯ ಇಂಜಿನಿಯರ್ ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು ಅಮಾನತ್ತಿನಲ್ಲಿ ಕಳೆದ ಅವಧಿ ಬಗ್ಗೆ -ಆದೇಶ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 43 ಇಎನ್ ಕ್ಯೂ 2016, ದಿನಾಂಕ:21.03.2017
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 43 ಇಎನ್ ಕ್ಯೂ 2016, ದಿನಾಂಕ:22.12.2017
3. ಶ್ರೀಮತಿ ಕೌಸರ್ ಪರ್ವೀನ್ ಇವರ ಮನವಿ ದಿನಾಂಕ:13.09.2019

**ಪ್ರಸ್ತಾವನೆ:-**

ಶ್ರೀಮತಿ ಕೌಸರ್ ಪರ್ವೀನ್ ಇವರು ಪ್ರಥಮ ದರ್ಜೆ ಸಹಾಯಕರಾಗಿ ಮುಖ್ಯ ಇಂಜಿನಿಯರ್ ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ 2014 ನೇ ಸಾಲಿನಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ 80 ತಾಲ್ಲೂಕು ಮಟ್ಟದ ಪ್ರಯೋಗಾಲಯ ಸ್ಥಾಪನೆ ಹಾಗೂ ಸದರಿ ಪ್ರಯೋಗಾಲಯಗಳಿಗೆ ಉಪಕರಣ ಸರಬರಾಜು ಪ್ರಕ್ರಿಯೆಯಲ್ಲಿ ಕಛೇರಿಗಳಿಗೆ ಉಪಕರಣ ಸರಬರಾಜು ಆಗಿರುವ ಬಗ್ಗೆ ದೃಢೀಕರಣ ಪಡೆಯದೇ ಹಣ ಪಾವತಿಸಿರುವದು, ಶಾಸನಬದ್ಧ ಕಟಾವಣೆಗಳನ್ನು ಮಾಡದೇ ಹಣ ಪಾವತಿಸಿರುವ ಆರೋಪಗಳಿಗೆ ಸಂಬಂಧಿಸಿದಂತೆ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಸದರಿಯರವನ್ನು ಒಳಗೊಂಡಂತೆ ಇತರರನ್ನು ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:21.03.2017 ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ತದನಂತರ ಮೇಲೆ ಓದಲಾದ ಕ್ರಮಾಂಕ:(2) ರ ದಿನಾಂಕ:22.12.2017 ರ ಆದೇಶದಲ್ಲಿ ಶ್ರೀಮತಿ ಕೌಸರ್ ಪರ್ವೀನ್ ಇವರ ಅಮಾನತ್ತನ್ನು ತೆರವುಗೊಳಿಸಿ, ಸೇವೆಗೆ ಪುನರ್ ಸ್ಥಾಪಿಸಿ ಅವರ ಸೇವೆಯನ್ನು ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ಹಿಂದಿರುಗಿಸಲಾಗಿತ್ತು.

ಶ್ರೀಮತಿ ಕೌಸರ್ ಪರ್ವೀನ್ ಇವರು ಮೇಲೆ ಓದಲಾದ ಕ್ರಮಾಂಕ:(3) ರ ದಿನಾಂಕ:13.09.2019 ರಂದು ಮನವಿ ಸಲ್ಲಿಸಿ ಸದರಿ ಪ್ರಕರಣದಲ್ಲಿ ತಮ್ಮ ಪಾತ್ರ ಇರುವುದಿಲ್ಲವೆಂದು, ಆದ್ದಾಗ್ಯೂ ತಮಗೆ 2017 ರಿಂದ ಬರಬೇಕಾದ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಮಂಜೂರು ಮಾಡಿರುವುದಿಲ್ಲವೆಂದು, ಹಜ್ ಯಾತ್ರೆ ಕೈಗೊಳ್ಳಲು ಅನುಮತಿ ನೀಡಿರುವುದಿಲ್ಲವೆಂದು ತಿಳಿಸಿ, ವೇತನ ಬಡ್ತಿ ಪಡೆಯಲು, ಹಜ್ ಯಾತ್ರೆ ಕೈಗೊಳ್ಳಲು ಹಾಗೂ ಅಧೀಕ್ಷಕ ಹುದ್ದೆಗೆ ಪದೋನ್ನತಿ ಪಡೆಯಲು ಅನುವಾಗುವಂತೆ ಸದರಿ ಪ್ರಕರಣದಲ್ಲಿ ತಮ್ಮನ್ನು ದೋಷಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿ/ದಾಖಲೆ ಹಾಗೂ ಶ್ರೀಮತಿ ಕೌಸರ್ ಪರ್ವೀನ್ ಇವರ ಮನವಿಯನ್ನು ಪರಿಶೀಲಿಸಿರುತ್ತದೆ. ಪ್ರಸಕ್ತ ಪ್ರಕರಣದಲ್ಲಿ ಶ್ರೀಮತಿ ಕೌಸರ್ ಪರ್ವೀನ್, ಪ್ರ.ದ.ಸ, ಲೋಕೋಪಯೋಗಿ ಇಲಾಖೆ ಇವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯು ದಿನಾಂಕ:21.03.2017 ರಿಂದ 22.12.2017 ರವರೆಗೆ ಸೇವೆಯಿಂದ ಅಮಾನತ್ತುಪಡಿಸಿದ್ದರೂ ಸಹ ಇದುವರೆಗೂ ಇಲಾಖಾ ವಿಚಾರಣೆ ಪ್ರಾರಂಭಿಸಿರುವುದಿಲ್ಲ. ಹಾಗಾಗಿ ಅವರಿಗೆ ಲಭ್ಯವಾಗುವ ವಾರ್ಷಿಕ ವೇತನ ಬಡ್ತಿಗಳನ್ನು ಅನಿರ್ದಿಷ್ಟವಾಗಿ ಮಂಜೂರು ಮಾಡದೇ

ತಡೆಹಿಡಿಯುವುದು ಸಮಂಜಸವಾಗುವುದಿಲ್ಲ. ಆದ್ದರಿಂದ ಅವರ ವಿರುದ್ಧ ಇಲಾಖಾ ವಿಚಾರಣೆ ಇದುವರೆಗೂ ಪ್ರಾರಂಭವಾಗದಿರುವುದರಿಂದ ಅವರು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಇಲಾಖಾ ವಿಚಾರಣೆ ಪೂರ್ಣಗೊಂಡ ನಂತರ ಪುನರ್ ಪರಿಶೀಲಿಸುವ ಷರತ್ತಿಗೊಳಪಟ್ಟು ಕೆ.ಸಿ.ಎಸ್.ಆರ್ ನಿಯಮ 100(7) ರ ಅನುಸಾರ ಅವರ ಹಕ್ಕಿನಲ್ಲಿರುವ ರಜೆಯನ್ನು ಮಂಜೂರು ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**<u>ಆದೇಶ ಸಂಖ್ಯೆ: ಗ್ರಾಅಪ 164 ಜಿಪಅ 2019, ದಿನಾಂಕ: 16.05.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಶ್ರೀಮತಿ ಕೌಸರ್ ಪರ್ವೀನ್, ಹಿಂದಿನ ಪ್ರಥಮ ದರ್ಜೆ ಸಹಾಯಕರು, ಮುಖ್ಯ ಇಂಜಿನಿಯರ್ ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು ಅಮಾನತ್ತಿನಲ್ಲಿ ಕಳೆದ ಅವಧಿ ದಿನಾಂಕ:21.03.2017 ರಿಂದ 22.12.2017 ರವರೆಗಿನ ಅವಧಿಯನ್ನು ಇಲಾಖಾ ವಿಚಾರಣೆ ಪೂರ್ಣಗೊಂಡ ನಂತರ ಪುನರ್ ಪರಿಶೀಲಿಸುವ ಷರತ್ತಿಗೊಳಪಟ್ಟು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 100(7) ರ ಅನುಸಾರ ಅವರ ಹಕ್ಕಿನಲ್ಲಿರುವ ರಜೆಯನ್ನು ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶದನುಸಾರ
ಮತ್ತು ಅವರ ಹೆಸರಿನಲ್ಲಿ

16/05/2020
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ, (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಇವರಿಗೆ:</u>

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು(ಲೆಕ್ಕಪತ್ರ 1 & 2)(ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.
4. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು
6. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ(ದಕ್ಷಿಣ) ವಲಯ, ಕೆ.ಆರ್.ಸರ್ಕಲ್, ಬೆಂಗಳೂರು.
7. ಶ್ರೀಮತಿ ಕೌಸರ್ ಪರ್ವೀನ್, ಪ್ರ.ದ.ಸ, ಮುಖ್ಯ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ(ದಕ್ಷಿಣ) ವಲಯ, ಕೆ.ಆರ್.ಸರ್ಕಲ್, ಬೆಂಗಳೂರು-01
8. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಉಪಕಾರ್ಯದರ್ಶಿ(ಆಡಳಿತ-1) ಇವರುಗಳ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರಿಗೆ
9. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ,ರಾಜ್ ಇಲಾಖೆ ಇವರಿಗೆ ವೆಬ್ ಸೈಟ್ ನಲ್ಲಿ ಪ್ರಕಟಿಸುವ ಸಲುವಾಗಿ
10. ರಕ್ಷಾ ಕಡತ